ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) ಇಲ್ಲ.

ಆ) ಹೌದು.

1116 (1094) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) Whether the Government has any proposal to group insure the petty shop keepers in Bangalore, if so. furnish the details, if, is it not advisable to take consensus and implement this proposal for the benefit of these under privileged traders who are constantly under threat from natural and unnatural disasters ?

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು):–

ಅ) ಅಂತಹ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.

1117 (1412) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ಮೇಲೆ ಉಪಯೋಗಿಸುವ ಹಾಸುಬಟ್ಟೆ ಕಳಪೆ ಮಟ್ಟದ್ದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ, ಈ ವಿಷಯದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಸರ್ಕಾರಿ ಆಸ್ಪತ್ರೆಗಳಲ್ಲಿ ಅದರಲ್ಲೂ ಲೇಡಿ ಕರ್ಜನ್ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿ ಎಷ್ಟು ಸಮಯಕೊಮ್ಮೆ ಹಾಸುಬಟ್ಟೆಗಳನ್ನು ಬದಲಿಸಲಾಗುತ್ತದೆ ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಆಸ್ಪತ್ರೆಗಳಿಗೆ ಬೇಕಾಗುವ ಒಳ್ಳೆ ಗುಣಮಟ್ಟದ ಹಾಸು ಬಟ್ಟೆಗಳನ್ನು ಸರ್ಕಾರ ಖರೀದಿಸುತ್ತಿದೆ.

ಆ) ತಾಲ್ಲೂಕು ಪಂಚಾಯತ್/ಜಿಲ್ಲಾ ಪಂಚಾಯತ್ ಹಾಗೂ ರಾಜ್ಯ ವಲಯದ ಅನುದಾನದಡಿಯಲ್ಲಿ ಮತ್ತು ಬಾಹ್ಯ ಮೂಲಗಳಿಂದ ಬಂದಂತಹ ಹಣದಲ್ಲಿ ಹಾಸು ಬಟ್ಟೆಗಳನ್ನು ಖರೀದಿ ಮಾಡಿ ಉಪಯೋಗಿಸಲಾಗುತ್ತಿದೆ.

ಎಲ್ಲಾ ಆಸ್ಪತ್ರೆಗಳಲ್ಲಿ ಹಾಸು ಬಟ್ಟೆಗಳನ್ನು ಖರೀದಿ ಮಾಡುವಾಗ ಉತ್ತಮ ಗುಣಮಟ್ಟದ ಹಾಸು ಬಟ್ಟೆಯನ್ನು ಖರೀದಿ ಮಾಡಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ನಿರ್ದೇಶನವನ್ನು ಮಾಸಿಕ ಸಭೆಗಳಲ್ಲಿ ಮತ್ತು ಲಿಖಿತವಾಗಿ ನೀಡಲಾಗುತ್ತಿದೆ.

ಇ) ಕೊಳೆಯಾದ ಹಾಸು ಬಟ್ಟೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ 2 ರಿಂದ 3 ದಿನಗಳಿಗೊಮ್ಮೆ ಬದಲಾಯಿಸಲಾಗುತ್ತದೆ.

ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು ಇಲ್ಲಿ ವಾರಕ್ಕೆ ಎರಡು ಬಾರಿ ಹಾಸಿಗೆಯ ಬಟ್ಟೆಗಳನ್ನು ಬದಲಾಯಿಸಲಾಗುತ್ತದೆ. ಹಾಗೂ ಹೊಸ ರೋಗಿ ಆಸ್ಪತ್ರೆಗೆ ದಾಖಲಾದಾಗ ಮತ್ತೆ ಹಾಸಿಗೆ ಬಟ್ಟೆಗಳನ್ನು ಬದಲಾಯಿಸಲಾಗುತ್ತದೆ.

1118 (760) ಡಾ॥ ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೇರಳದಲ್ಲಿ ಚಿಕ್ಕನ್ ಗೂನ್ಯ ಖಾಯಿಲೆಯು ಹರಡಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಂಡಿರುವ ಕ್ರಮಗಳೇನು ;

ಆ) ಈ ಖಾಯಿಲೆಯ ರೋಗ ಲಕ್ಷಣಗಳ ಬಗ್ಗೆ ರಾಜ್ಯದ ಜನತೆಗೆ ನೀಡಲಾಗಿರುವ ಮಾಹಿತಿ ಬಗ್ಗೆ ತಿಳಿಸುವುದು ;

ಇ) ಇದಕ್ಕಾಗಿ, ಅನುದಾನವನ್ನೇನಾದರು ಒದಗಿಸಿದಿಯೇ ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಚಿಕುನ್‌ಗುನ್ಯ ಕಾಯಿಲೆಯ ತಡೆಗಟ್ಟುವಿಕೆಗಾಗಿ ರಾಜ್ಯದಲ್ಲಿ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ರೋಗ ಹತೋಟಿಗಾಗಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಿ ಕಾಲಕಾಲಕ್ಕೆ ಸಭೆ ಸೇರಿ ಅವಶ್ಯಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

2. ಜೀವರಕ್ಷಕ ಔಷಧಿಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಇರಿಸಲಾಗಿದೆ. ಅಲ್ಲದೆ ಆಯುರ್ವೇದ ವೈದ್ಯರುಗಳು ಇರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಯುರ್ವೇದ ಔಷಧ ಚಿಕಿತ್ಸೆಯನ್ನೂ ಸಹ ನೀಡಲು ವ್ಯವಸ್ಥೆ ಮಾಡಲಾಗಿದೆ.

3. ಸ್ಥಳೀಯವಾಗಿ ಜ್ವರಪೀಡಿತರಿಗೆ ಚಿಕಿತ್ಸೆ ಸಿಗಲು ಅನುಕೂಲವಾಗುವಂತೆ ಔಷಧಿ ವಿತರಣಾ ಕೇಂದ್ರಗಳು ಹಾಗೂ ಜ್ವರ ಚಿಕಿತ್ಸಾ ಕೇಂದ್ರಗಳನ್ನು ಸಮಾಜ ಸೇವಕರು, ಶಾಲಾ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಾಯದಿಂದ ಸ್ಥಾಪಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

4. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ಅಡಿಯಲ್ಲಿ ಪ್ರತಿಯೊಂದು ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಿಗೆ ಬಿಡುಗಡೆಯಾಗಿರುವ